# ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

**ಸಿ.ಸಿ.ನಂಃ 503/2018**

ಸಿಡಬ್ಲ್ಯು -9

ಪಿಡಬ್ಲ್ಯು -10

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪಿ ಎಂ ಅನೀಶ್ |
| ತಂದೆಯ ಹೆಸರು | ಃ | ಮೊಹಮ್ಮದ್ |
| ವಯಸ್ಸು | ಃ | 34 ವರ್ಷ |
| ವೃತ್ತಿ | ಃ | ಖಾಸಗಿ ನೌಕರ |
| ವಾಸಸ್ಥಳ | ಃ | ವಿರಾಜಪೇಟೆ |

**ದಿನಾಂಕಃ 5.1.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಶ್ರೀ. ಎಪಿಪಿಯವರಿಂದಃ-

ಅಮಾನತ್ತು ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-16 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-16 ಬಿ ಎಂದು ಗುರುತಿಸಲಾಯಿತು. ಮತ್ತೊಂದು ಅಮಾನತ್ತು ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-17 ಎಂದು ಈಗಾಗಲೇ ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-17 ಬಿ ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗಳನ್ನು ನಾನು 2013 ನೇ ಇಸವಿಯಲ್ಲಿ ವಿರಾಜಪೇಟೆ ನಗರ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಆರೋಪಿಯನ್ನು ನಾನು ನೋಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಆರೋಪಿಯಿಂದ ಪೋಲಿಸರು ವಶಪಡಿಸಿಕೊಂಡಿರುವುದಿಲ್ಲ. ಛಾಯಾಚಿತ್ರದಲ್ಲಿನ ಸ್ವತ್ತುಗಳನ್ನು ಗುರುತಿಸಲು ಸಾಧ್ಯವಿಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

ಪಾಟೀಸವಾಲುಃ ಶ್ರೀ ಎಪಿಪಿ ರವರಿಂದಃ

ದಿಃ 18.11.2013 ರಂದು ನಾನು ಹಾಗೂ ಚಾಸಾ-10 ರವರು ಮಾತನಾಡಿಕೊಂಡಿರುವಾಗ ಪೋಲಿಸರು ಬಂದು ಸಿಪಿಐ ಕಚೇರಿಗೆ ಬರುವಂತೆ ತಿಳಿಸಿದ ಮೇರೆಗೆ ನಾನು ಅಲ್ಲಿಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲಿ ಆರೋಪಿಯಾದ ಸಲೀಂ ನನ್ನು ತೋರಿಸಿ ಈತ ಕಳ್ಳತನ ಮಾಡಿದ ವಸ್ತುಗಳನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಪಂಚರಾಗಲು ಬರಲು ತಿಳಿಸಿದ ಮೇರೆಗೆ ನಾವು ಒಪ್ಪಿರುತ್ತೇವೆ ಎಂದರೆ ಸರಿಯಲ್ಲ. ನಾವು ಜೀಪಿನಲ್ಲಿ ಮೈಸೂರಿನ ಜನತಾ ನಗರದಲ್ಲಿರುವ ಚಾಸಾ-12 ಹಾಗೂ ಚಾಸಾ-13 ಮನೆಯಲ್ಲಿ ತೋರಿಸಿ ಕೊಟ್ಟು ಈ ಪ್ರಕರಣದ ಓಲೆ ಜುಮಕಿ ಹಾಗೂ ಒಂದು ಉಂಗುರವನ್ನು ಸ್ವಾಧೀನ ಪಡಿಸಿಕೊಂಡು ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಮ್ಮನ್ನು ಜನತಾ ನಗರದಿಂದ ಗೋಕುಲಂ ನಲ್ಲಿರುವ ಅಶ್ವಿನಿ ಒಡವೆ ಅಂಗಡಿಗೆ ಕರೆದುಕೊಂಡು ಹೋಗಿ ಆರೋಪಿತರು ಅಲ್ಲಿ ಚಾಸಾ-14 ರವರನ್ನು ತೋರಿಸಿಕೊಟ್ಟು ಕಳವು ಮಾಡಿದ ಒಡವೆಗಳನ್ನು ಇವರಿಗೆ ಮಾರಾಟ ಮಾಡಿದ್ದೇನೆ ಎಂದು ತಿಳಿಸಿಕೊಟ್ಟ ಮೇರೆಗೆ ಪೋಲಿಸರು ಒಂದು 10 ಗ್ರಾಂ 500 ಮಿಲಿ ಇರುವ ಒಂದು ಚಿನ್ನದ ಓಲೆ ಮತ್ತು ಜುಮುಕಿಯನ್ನು, 15 ಗ್ರಾಂ 960 ಮಿಲಿ ಇರುವ ಒಂದು ಜೊತೆ ಚಿನ್ನದ ಬಳೆಯನ್ನು, 16 ಗ್ರಾಂ

ಇರುವ ಒಂದು ಜೊತೆ ಚಿನ್ನದ ಬಳೆಯನ್ನು, 11 ಗ್ರಾಂ 40 ಮಿಲಿ ಇರುವ ಚಿನ್ನದ ರೋಪ್‌ಚೈನನ್ನು 6 ಗ್ರಾಂ 60 ಮಿಲಿ ಇರುವ ಸಣ್ಣ ಚಿನ್ನದ 14 ಚೈನು ಗ್ರಾಂ 870 ಮಿಲಿ ಇರುವ ಚಿನ್ನದ ಬ್ರೇಸ್‌ಲೈಟನ್ನು, 8 ಗ್ರಾಂ 820 ಮಿಲಿ ಇರುವ ಕೊಕ್ಕೆತಾತಿಯನ್ನು, 8 ಗ್ರಾಂ 710 ಮಿಲಿ ಇರುವ ನಕ್ಲೇಸನ್ನು, 4 ಗ್ರಾಂ 230 ಮಿಲಿ ಇರುವ ಬಿಳಿ ಕಲ್ಲಿನ ಚಿನ್ನದ ಉಂಗುರ, 5 ಗ್ರಾಂ 970 ಮಿಲಿ ಇರುವ ಒಂದು ಚಿನ್ನದ ಉಂಗುರವನ್ನು, 14 ಗ್ರಾಂ 640 ಮಿಲಿ ಇರುವ ಒಂದು ಚಿನ್ನದ ಕಡಗವನ್ನು, 8 ಗ್ರಾಂ 640 ಮಿಲಿ ಇರುವ ಒಂದು ಚಿನ್ನದ ಓಲೆ ಮತ್ತು ಜುಮುಕಿಯನ್ನು, 9 ಗ್ರಾಂ 80 ಮಿಲಿ ಇರುವ ಒಂದು ಹರಳಿನ ಚಿನ್ನದ ಓಲೆಯನ್ನು ವಶಪಡಿಸಿಕೊಂಡು ಮಹಜರಿಗೆ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ-19 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಿ.ಮಹಾಲಕ್ಷ್ಮಿ
ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ವಿರಾಜಪೇಟೆ